ಆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 2004–05ರ ಅವಧಿಯಲ್ಲಿ ಒಟ್ಟು ರೂ.9,08,02,713/– ಮತ್ತು ಏಪ್ರಿಲ್–05 ರಿಂದ ಫೆಬ್ರವರಿ–06 ಅವಧಿಯಲ್ಲಿ ಒಟ್ಟು ರೂ.8,13,98,063/– ನಷ್ಟವಾಗಿದೆ.

ಇ. ಇಲ್ಲ.

ಈ. ಉದ್ಭವಿಸುವುದಿಲ್ಲ.

ಉ. ಹೌದು.

**248 (446)** ಶ್ರೀ ಸಿ.ಟಿ.ರವಿ (ಚಿಕ್ಕಮಗಳೂರು) ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ರಾಜ್ಯದಲ್ಲಿ ಕೇಂದ್ರ ರಸ್ತೆ ನಿಧಿ (ಸಿ.ಆರ್.ಎಫ್) ಯೋಜನೆಯಡಿಯಲ್ಲಿ ಮಂಜೂರಾಗಿರುವ ಆರ್ಥಿಕ ಮತ್ತು ಭೌತಿಕ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು);

ಆ. ಈ ಯೋಜನೆಯಲ್ಲಿ ರಸ್ತೆ ಆಯ್ಕೆಗೆ ಇರುವ ಮಾನದಂಡಗಳೇನು;

ಇ. ಈ ಯೋಜನೆಯ ರಸ್ತೆಗಳ ಕಾಮಗಾರಿಗೆ ಹಾಕಿಕೊಂಡಿರುವ ಕಾಲಮಿತಿ ಏನು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ. ರಾಜ್ಯದಲ್ಲಿ 2000–01 ರಿಂದ ಈವರೆಗೆ ಕೇಂದ್ರ ರಸ್ತೆ ನಿಧಿ ಅಡಿ 625 ಕಾಮಗಾರಿಗಳು 445.82 ಕೋಟಿ ರೂ.ಮೊತ್ತಕ್ಕೆ ಮಂಜೂರಾಗಿರುತ್ತದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ–1 ರಲ್ಲಿ ನೀಡಿದೆ.

ಆ. ಈ ಯೋಜನೆಯಡಿ ಕೇಂದ್ರ ಸರ್ಕಾರದ ನಿಯಮಾನುಸಾರ ಜಿಲ್ಲಾ ಮುಖ್ಯ ರಸ್ತೆ ಹಾಗೂ ರಾಜ್ಯ ಹೆದ್ದಾರಿಗಳನ್ನು ಮಾತ್ರ ಅಭಿವೃದ್ಧಿಗೆ ಪರಿಗಣಿಸಲಾಗುತ್ತಿದೆ. ಹಾಗೂ ಭೂಸ್ವಾಧೀನ ಇಲ್ಲದ ರಸ್ತೆಗಳನ್ನು ಮಾತ್ರ ಪರಿಗಣಿಸಲಾಗುವುದು. ಸ್ವೀಕೃತವಾದ ಪ್ರಸ್ತಾವನೆಗಳಲ್ಲಿ ಬೇರೆ ಯಾವುದೇ ಯೋಜನೆಯಡಿ ಕೈಗೊಂಡಿಲ್ಲದ ರಸ್ತೆಗಳನ್ನು, ರಸ್ತೆಯ ಸ್ಥಿತಿಯನ್ನು ಅವಲಂಭಿಸಿ ಲಭ್ಯವಿರುವ ಅನುದಾನಕ್ಕೆ ಅನುಗುಣವಾಗಿ ಪಟ್ಟಿ ತಯಾರಿಸಿ ಹಂತ ಹಂತವಾಗಿ ಅನುಮೋದನೆ ಪಡೆಯಲು ಕೇಂದ್ರ ಭೂ ಸಾರಿಗೆ ಮಂತ್ರಾಲಯಕ್ಕೆ ಸಲ್ಲಿಸಲಾಗುವುದು.

ಇ. ಕೇಂದ್ರ ಸರ್ಕಾರದ ನಿಯಮಾನುಸಾರ ಈ ಯೋಜನೆಯಡಿ ಮಂಜೂರಾಗಿರುವ ಕಾಮಗಾರಿಗಳನ್ನು 24 ತಿಂಗಳೊಳಗೆ ಪೂರ್ಣಗೊಳಿಸ ಬೇಕಾಗಿರುತ್ತದೆ. ಕಾಮಗಾರಿಗಳ ಅಂದಾಜು ಮೊತ್ತ ಹಾಗೂ ಅಭಿವೃದ್ಧಿಯ ರೀತಿಗನುಗುಣವಾಗಿ ಇವುಗಳ ಕಾಲಮಿತಿಯನ್ನು ನಿಗದಿಪಡಿಸಲಾಗುವುದು.

**APPENDEX-1**

**DISTIRCT-WISE ABSTRACT OF APPROVED 625 CENTRAL ROAD FUND WORKS 2000-01 TO 2005-06**

| Sl. No | District | Grand Total | |
|---|---|---|---|
| | | No. of works | Estd. Cost (Rs.in Lakhs) |
| 1 | Bagalkot | 19 | 1547.37 |
| 2 | Bangalore (Rural) | 34 | 2407.50 |
| 3 | Banglore (Urban) | 6 | 330.00 |
| 4 | Belgaum | 41 | 2809.55 |
| 5 | Bellary | 5 | 230.00 |
| 6 | Bidar | 29 | 2167.97 |
| 7 | Bijapur | 21 | 1334.00 |
| 8 | Chamarajanagar | 10 | 511.00 |
| 9 | Chikkamagalore | 23 | 1368.00 |
| 10 | Chitradurga | 20 | 1127.00 |
| 11 | Dakshina Kannada | 25 | 1939.10 |
| 12 | Davangere | 20 | 1225.00 |
| 13 | Dharwad | 28 | 1861.87 |
| 14 | Gadag | 16 | 1045.00 |
| 15 | Gulbarga | 39 | 2498.16 |
| 16 | Hassan | 48 | 4833.67 |
| 17 | Haveri | 18 | 1120.00 |
| 18 | Kodagu | 8 | 435.00 |
| 19 | Kolar | 42 | 2343.61 |
| 20 | Koppal | 16 | 990.00 |
| 21 | Mandya | 31 | 2642.00 |
| 22 | Mysore | 18 | 920.00 |
| 23 | Raichur | 16 | 838.99 |
| 24 | Shimoga | 17 | 1410.80 |
| 25 | Tumkur | 37 | 4176.59 |
| 26 | Udupi | 18 | 1212.20 |
| 27 | Uttara Kannada | 20 | 1258.00 |
| **Total** | | **625** | **44582.38** |